ವಿಷಯ:- ವೈದ್ಯಕೀಯ ಮತ್ತು ಇಂಜಿನಿಯರಿಂಗ್ ವಿದ್ಯಾರ್ಥಿಗಳ ಪ್ರವೇಶಾವಕಾಶ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 268(450)

ಶ್ರೀ ಆರ್.ಎನ್.ನಾಯ್ಕ(ಭಟ್ಕಳ)

ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ರಾಜ್ಯದಲ್ಲಿ ಒಟ್ಟು ಎಷ್ಟು ಇಂಜಿನಿಯರಿಂಗ್ ಹಾಗೂ ವೈದ್ಯಕೀಯ ವಿದ್ಯಾರ್ಥಿಗಳಿಗೆ ಪ್ರವೇಶದ ಅವಕಾಶವಿದೆ?

ಆ. ಎಷ್ಟು ವಿದ್ಯಾರ್ಥಿಗಳಿಗೆ ಶುಲ್ಕ ರಹಿತ ಪ್ರವೇಶ ಹಾಗೂ ಎಷ್ಟು ವಿದ್ಯಾರ್ಥಿಗಳಿಗೆ ಶುಲ್ಕ ಸಹಿತ ಪ್ರವೇಶ ಒದಗಿಸಲಾಗವುದು?

ಇ. ಪ್ರವೇಶ ನೀಡುವಾಗ ರೋಸ್ಟರ್ ಪದ್ಧತಿಯನ್ನು ಅನುಸರಿಸಲಾಗುವುದೆ?

ಈ. ಹಾಗಿದ್ದಲ್ಲಿ ಯಾವ ವರ್ಗಕ್ಕೆ ಎಷ್ಟು ಸ್ಥಳ ನೀಡಲಾಗುವುದು?

ಉ. ಖಾಸಗಿ ಕಾಲೇಜು ಆಡಳಿತ ಮಂಡಳಿಗಳು ಸರ್ಕಾರದ ನೀತಿ ಒಪ್ಪಿರುವರೆ?

ಊ. ಇಲ್ಲವಾದಲ್ಲಿ ಸರ್ಕಾರದವರು ಕೈಗೊಳ್ಳ ಬಯಸಿದ ಕ್ರಮವೇನು?

ಶ್ರೀ ಎಸ್.ಎಂ.ಯಾಹ್ಯಾ

(ಉನ್ನತ ಶಿಕ್ಷಣ ಸಚಿವರು)

	ಕೋರ್ಸುಗಳು	ಸೀಟುಗಳ ಸಂಖ್ಯೆ
1)	ಇಂಜಿನಿಯರಿಂಗ್	18,274
2)	ವೈದ್ಯಕೀಯ	3,361

		ಫ್ರೀ ಸೀಟುಗಳು	ಪೇಮೆಂಟ್ ಸೀಟುಗಳು
1)	ಇಂಜಿನಿಯರಿಂಗ್	10,823	7,451
2)	ವೈದ್ಯಕೀಯ	1,998	1,363

"ಫ್ರೀ" ಸೀಟುಗಳಿಗೆ ಮಾತ್ರ ರೋಸ್ಟರ್‌ಪದ್ಧತಿಯನ್ನು ಅನುಸರಿಸಲಾಗುವುದು.

ಯಾವ ಯಾವ ವರ್ಗಕ್ಕೆ ಎಷ್ಟೆಷ್ಟು ಶೇಕಡವಾರು ಸೀಟುಗಳನ್ನು ನೀಡಲಾಗುವುದೆಂಬ ವಿವರಗಳನ್ನು ಈ ಕೆಳಕಂಡಂತೆ ನೀಡಲಾಗಿದೆ.

1.	ಎಸ್.ಸಿ.	:ಶೇ. 15
2.	ಎಸ್.ಟಿ	:ಶೇ. 3
3.	ಗ್ರೂಪ್ 'ಎ'	:ಶೇ.5
4.	ಗ್ರೂಪ್ 'ಬಿ'	:ಶೇ.15
5.	ಗ್ರೂಪ್ 'ಸಿ'	:ಶೇ.16
6.	ಗ್ರೂಪ್ 'ಡಿ'	:ಶೇ.9
7.	ಗ್ರೂಪ್ 'ಇ'	:ಶೇ.5

8.	ಸಾಮಾನ್ಯ ಗುಂಪು	:ಶೇ.32
9.	ರೂರಲ್ ಕೋಟಾ	:ಶೇ.15
10.	ಸ್ಪೋರ್ಟ್ಸ್ ಕೋಟಾ	: 40 ಸೀಟುಗಳು.
11.	ಎನ್.ಸಿ.ಸಿ ಕೋಟಾ	: 36 ಸೀಟುಗಳು.
12.	ಸ್ಕೌಟ್ಸ್ :ಗೈಡ್ಸ್ ಕೋಟಾ	: 5 ಸೀಟುಗಳು.
13.	ಮಗ:ಮಗಳು(ಸ್ವಾತಂತ್ರ ಹೋರಾಟಗಾರರ ಮಕ್ಕಳಿಗೆ)ಕೋಟಾ	:35 ಸೀಟುಗಳು.
14.	ಸೈನಿಕರ:ಮಾಜಿ ಸೈನಿಕರ ಕೋಟಾ.	:80 ಸೀಟುಗಳು.
15.	ಅಂಗವಿಕಲರ ಕೋಟಾ	:10 ಸೀಟುಗಳು
16.	ಹೊರನಾಡು ಕನ್ನಡಿಗರ ಕೋಟಾ	: 20 ಸೀಟುಗಳು
17.	ಗಡಿನಾಡು ಕನ್ನಡಿಗರ ಕೋಟಾ	: 12 ಸೀಟುಗಳು
18.	ಡಿಪ್ಲೊಮಾ ಕೋಟಾ	:ಶೇಕಡ 5 ಸೀಟುಗಳು.
19.	ಆಂಗ್ಲ ಇಂಡಿಯನ್ ಕೋಟಾ	:1ಸೀಟು
20.	ಪಾರ್ಸಿ ಕೋಟಾ	: 2 ಸೀಟುಗಳು.

ಸರ್ವೋಚ್ಚ ನ್ಯಾಯಾಲಯದ ತೀರ್ಮಾನಕ್ಕೆ ಅನುಸಾರವಾಗಿ ಪ್ರವೇಶ ನಿಯಮಾವಳಿಗಳನ್ನು ರೂಪಿಸಲಾಗಿದ್ದು ಸದರಿ ನಿಯಮಗಳಿಗೆ ಖಾಸಗಿ ಕಾಲೇಜುಗಳು ಬದ್ಧವಾಗಿದೆ.

ಉದ್ಭವಿಸುವುದಿಲ್ಲ.

ವಿಷಯ:- ಬೆಳಗಾವಿ ಜಿಲ್ಲೆಯ ಶ್ರೀ ಕ್ಷೇತ್ರ ಸೋಗಲದಲ್ಲಿ ಚಿಗರಿವನ ಹಾಗೂ ಫಾರೆಸ್ಟ್ ಐ.ಬಿ.ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 269(394)

ಶ್ರೀ ಶಿವಾನಂದ ಎಚ್.ಕೌಜಲಗಿ(ಬೈಲಹೊಂಗಲ)

ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾವಿ ಜಿಲ್ಲೆಯಲ್ಲಿರುವ ಶ್ರೀ ಕ್ಷೇತ್ರ ಸೋಗಲದಲ್ಲಿ ಚಿಗರಿ ವನ ಕಟ್ಟಲಾಗುತ್ತಿರುವ ಸಂಗತಿ ನಿಜವೇ ಹಾಗೂ ಈ ಕೆಲಸವು ಈಗ ಅರ್ಧಕ್ಕೆ ನಿಂತ ಸಂಗತಿ ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಚಿಗರಿ ವನ ಕಟ್ಟುವ ಕೆಲಸವನ್ನು ಇನ್ನು ಎಷ್ಟು ದಿವಸಗಳೊಳಗಾಗಿ ಮುಗಿಸಲಾಗುವುದು?

ಇ) ಹಿಂದಿನ ಅರಣ್ಯ ಮಂತ್ರಿಗಳಾದ ಮಾನ್ಯ ಶ್ರೀ ದೇಶ್‌ಮುಖ್‌ರವರು ಶ್ರೀ ಕ್ಷೇತ್ರ ಸೋಗಲದಲ್ಲಿ ಫಾರೆಸ್ಟ್ ಐ.ಬಿ.ಕಟ್ಟುವ ಸಲುವಾಗಿ ಆದೇಶ ನೀಡಿದ ಪ್ರಕಾರ ಇಲ್ಲಿ ಐ.ಬಿ.ಕಟ್ಟಲು ಸರಕಾರದವರು ಯಾವ ಕ್ರಮ ಕೈಗೊಂಡಿರುವರು?

ಶ್ರೀ ಎಂ.ಪಿ.ಕೇಶವಮೂರ್ತಿ

(ಅರಣ್ಯ ರಾಜ್ಯ ಸಚಿವರು)

ನಿಜ. ಬಂದಿದೆ.